ಸಾಕ್ಷಿಯನ್ನು ದಿಃ 24-03-2026 ರಂದು ಪುನಃ ಕರೆಯಿಸಿ ಸತ್ಯ ಪ್ರತಿಜ್ಞೆ ಮಾಡಲಾಯಿತು.

**ಪಾಟೀ ಸವಾಲುಃ ಶ್ರೀ ಬಿ ಎಸ್ ಹೆಚ್ (1 ನೇ ಪ್ರತಿವಾದಿ ಪರವಾಗಿ)**

ಮುಖ್ಯ ವಿಚಾರಣೆಯನ್ನು ನಾನೇ ಹೇಳಿ ಬರೆಯಿಸಿದ್ದೇನೆ. ನಾನು ಶಾಲೆ ಕಲಿತಿಲ್ಲ ಹಾಗಾಗಿ ದಾವಾ ಜಮೀನುಗಳ ಸರ್ವೆ ನಂಬರ , ಮನೆ ನಂಬರ ಹಾಗೂ ಚಕಬಂದಿ ಹೇಳಲು ಬರುವುದಿಲ್ಲ. ಆದರೆ ಒಟ್ಟು 7 ವರೆ ಕೂರಗಿ ಜಮೀನು ಹಾಗೂ ಎರಡು ಮನೆ ಇವೆ. ದಾವಾ ಆಸ್ತಿ ಮೂಲತಃ ನಮ್ಮ ಮಾವ ಬಸಪ್ಪನಿಗೆ ಸೇರಿದ್ದವು. ದಾವಾ ಜಮೀನುಗಳು ನನ್ನ ಗಂಡ ಕುಟುಂಬಕ್ಕೆ ಸಂಬಂಧಿಸಿದ ಆಸ್ತಿಗಳಲ್ಲ ಎಂದರೆ ಸರಿಯಲ್ಲ. ದಾವಾ ಜಮೀನುಗಳು ಬಸಪ್ಪ ಅಜ್ಜಪ್ಪ ಕುಲಕರ್ಣಿ ಇವರಿಗೆ ಸೇರಿದ್ದವು ಎಂದರೆ ಸರಿ. ಸಾಕ್ಷಿ ಮುಂದುವರೆದು ಅವರೇ ನಮ್ಮ ತಾಯಿಗೆ ದಾವಾ ಜಮೀನುಗಳನ್ನು ಬಿಟ್ಟುಕೊಟ್ಟಿದ್ದಾರೆ ಎಂದು ಹೇಳುತ್ತಾರೆ. ದಾವಾ ಜಮೀನುಗಳು ಬಸಪ್ಪ ಅಜ್ಜಪ್ಪ ಕುಲಕರ್ಣಿ ಇವರಿಗೆ ಭೂನ್ಯಾಯಮಂಡಳಿಯಿಂದ ಮಂಜೂರಾಗಿದ್ದು ಆ ಬಗ್ಗೆ ಡ ನಂಬರ 2687 ಮಂಜೂರಾಗಿದೆ ಎಂದರೆ ಸರಿ. ಬಸಪ್ಪನ ಮರಣಾ ನಂತರ ಆತನ ಹೆಂಡತಿ ಮಕ್ಕಳು ವಾರಸಾ ಆದರು ಎಂದರೆ ಸರಿ. ಬಸಪ್ಪನ ವಾರಸುದಾರರು ದಾವಾ ಜಮೀನುಗಳನ್ನು ದಿಃ28.03.1987 ರಂದು ಡ ನಂಬರ 2826 ರ ಪ್ರಕಾರ ನಮ್ಮ ತಾಯಿ ಪಾರ್ವತೆವ್ವ ಕೋಂ ಗುರಯ್ಯ ನಾಗಲೋಟಿ @ ನಾಗಲೋಟಿಮಠ ಇವರಿಗೆ ಬಿಟ್ಟುಕೊಟ್ಟರು ಎಂದರೆ ಸರಿ. ಸದರಿ ಜಮೀನುಗಳಿಗೆ ನಮ್ಮ ತಾಯಿ ಸಂಪೂರ್ಣ ಮಾಲೀಕರಾದರು ಎಂದರೆ ಸರಿ. ನಂತರ ನಮ್ಮ ತಾಯಿ ನನ್ನ ಗಂಡ ವಿಜಯ ತಂದೆ ನಿಂಗಯ್ಯ ಕುಲಕರ್ಣಿ ಇವರಿಗೆ ದಿಃ05-04-2003 ರಂದು ಮೃತ್ಯುಪತ್ರ ಮಾಡಿದರು ಎಂದರೆ ಸರಿಯಲ್ಲ. ಸದರಿ ಮೃತ್ಯುಪತ್ರ ನೋಂದಣಿಯಾಗಿದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ಗಂಡ ಖೊಟ್ಟಿ ದಾಖಲೆ ಸೃಷ್ಟಿ ಮಾಡಿದ್ದಾರೆ ಎಂದು ಹೇಳುತ್ತಾರೆ. ಮೃತ್ಯುಪತ್ರದ ಆಧಾರದಲ್ಲಿ ನನ್ನ ಗಂಡ ಅಂದರೆ 4 ನೇ ಪ್ರತಿವಾದಿ ದಾವಾ ಆಸ್ತಿಗಳಿಗೆ ಸಂಪೂರ್ಣ ಮಾಲೀಕರಾಗಿದ್ದಾರೆ ಎಂದರೆ ಸರಿಯಲ್ಲ.

ದಾವಾ ಮನೆಗಳು ನಮ್ಮ ಮತ್ತು ಪ್ರತಿವಾದಿ ನಂ.1 ರಿಂದ 3 ರವರ ಪಿತ್ರಾರ್ಜಿತ ಆಸ್ತಿಗಳು ಎಂದರೆ ಸರಿ. ಸದರಿ ದಾವಾ ಮನೆಗಳಲ್ಲಿ ಮನೆಗಳಲ್ಲಿ ಮಾತ್ರ ನಮಗೆ ಪಾಲಿದೆ ಎಂದರೆ ದಾವಾ ಜಮೀನುಗಳು ಮತ್ತು ಮನೆಗಳು ಎಲ್ಲಾ ಆಸ್ತಿಗಳಲ್ಲಿ ನಮಗೆ ಪಾಲಿದೆ ಎಂದು ಹೇಳುತ್ತಾರೆ. ನಮ್ಮ ತಾಯಿ ಬಹಳ ದಿನಗಳ ಹಿಂದೆ ಅಂದರೆ ಸುಮಾರು 20 ವರ್ಷಗಳ ಹಿಂದೆ ತೀರಿಕೊಂಡಿದ್ದಾರೆ. ನಮ್ಮ ತಾಯಿ ತೀರಿಕೊಂಡ 8 ವರ್ಷದ ನಂತರ ಪ್ರತಿವಾದಿ ನಂ.4 ನಮ್ಮ ತಾಯಿ ಮಾಡಿದ

ಮೃತ್ಯುಪತ್ರವನ್ನು ನೋಂದಾಯಿಸಿದ್ದಾರೆ ಎಂದರೆ ಎಲ್ಲಾ ಖೊಟ್ಟಿ ದಾಖಲೆ ಸೃಷ್ಟಿ ಮಾಡಿಸಿಕೊಂಡಿದ್ದಾರೆ ಎಂದು ಹೇಳುತ್ತಾರೆ. ನಮ್ಮ ತಾಯಿ ತೀರಿಕೊಂಡ ನಂತರ ಏಕೆ ವಾರಸಾ ಮಾಡಿಸಿಕೊಂಡಿಲ್ಲ ಎಂಬ ಪ್ರಶ್ನೆಗೆ ನಮಗೆ ಅದು ಗೊತ್ತಾಗಲಿಲ್ಲ ಆದರೆ ನಮಗೆ ಗೊತ್ತಿಲ್ಲದಂತೆ ನನ್ನ ಗಂಡ ಖೊಟ್ಟಿ ರೀತಿಯಿಂದ ಜಮೀನುಗಳಿಗೆ ಹೆಸರು ಹಚ್ಚಿಕೊಂಡಿದ್ದಾನೆ ಎಂದು ಹೇಳುತ್ತಾರೆ.

ನಾನು 30 ವರ್ಷಗಳಿಂದ ನನ್ನ ತವರು ಮನೆ ಶಿರೋಳದಲ್ಲಿ ವಾಸವಾಗಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ನನ್ನ ಗಂಡನ ಊರಾದ ಚಿಕ್ಕನರಗುಂದದಲ್ಲಿ ವಾಸವಾಗಿದ್ದೇನೆ ಎಂದು ಹೇಳುತ್ತಾರೆ. ನಾನು ನನ್ನ ತವರು ಮನೆಯಲ್ಲಿದ್ದರೂ ಸಹ ಗಂಡನ ಮನೆಯಲ್ಲಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಜಮೀನುಗಳ ಪೈಕಿ ಸರ್ವೇ ನಂಬರ 175/2 ನ್ನು ನನ್ನ ಗಂಡ ಪ್ರತಿವಾದಿ ನಂ.3 ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ನನ್ನ ಗಂಡನಿಗೆ ಯಾವುದೇ ಹಕ್ಕಿಲ್ಲದೇ ಖೊಟ್ಟಿ ರೀತಿಯಿಂದ ಖರೀದಿ ಪತ್ರ ಮಾಡಿದ್ದಾರೆ ಎಂದು ಹೇಳುತ್ತಾರೆ. ಖರೀದಿ ಪತ್ರದ ಆಧಾರದಲ್ಲಿ ಪ್ರತಿವಾದಿ ನಂ.3 ಸದರಿ ಜಮೀನಿಗೆ ಮಾಲೀಕರಾಗಿದ್ದು, ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ.1 ರವರಿಗೆ ದಾವಾ ಮನೆಗಳಲ್ಲಿ ಮಾತ್ರ ಪಾಲಿದೆ ಎಂದರೆ ಎಲ್ಲಾ ಆಸ್ತಿಯಲ್ಲಿ ಪಾಲಿದೆ ಎಂದು ಹೇಳುತ್ತಾರೆ.

ದಾವೆ ಹೂಡುವ ಮೊದಲು ಪ್ರತಿವಾದಿ ನಂ.1 ರವರನ್ನು ಪಾಲು ಕೊಡು ಎಂದು ಕೇಳಿದ್ದೀರಾ ಎಂದರೆ ಎಲ್ಲಾ ಮಾಡಿದವನು ನನ್ನ ಗಂಡ ಹಾಗಾಗಿ ಹಿರಿಯರನ್ನು ಕೂಡಿಸಿ ನನ್ನ ಗಂಡ ಅಂದರೆ ಪ್ರತಿವಾದಿ ನಂ.4 ರವರನ್ನು ನಮ್ಮ ಆಸ್ತಿ ನಮಗೆ ಬಿಟ್ಟುಕೊಡುವಂತೆ ಕೇಳಿದ್ದೇನೆ ಎಂದು ಹೇಳುತ್ತಾರೆ. ಪ್ರತಿವಾದಿ ನಂ.1 ರವರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿ, ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ವಿನಂತಿ ಮೇರೆಗೆ ಪ್ರತಿವಾದಿ ನಂ.3 ರ ಪರ ಪಾಟೀ ಸವಾಲಿಗೆ ಮುಂದೂಡಿದೆ)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)
ಓ ಹೇ ಕೇ ಸರಿ ಇದೆ.

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಗದಗ.